ಈ) ಈ ಯೋಜನೆಗೆ ಸುಮಾರು ರೂ. 2750 ಲಕ್ಷ ಅಂದಾಜು ಮಾಡಲಾಗಿದೆ.

555(455) : ಶ್ರೀ ಹೊನ್ನಾಳಿ ಜಬ್ಬಾರ್‌ಖಾನ್ ಹಯಾತ್‌ಖಾನ್ (ಹುಬ್ಬಳ್ಳಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿಯ ಹೆಗ್ಗೇರಿ ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಹೊಸ ಸಿಟಿ ಬಸ್ ನಿಲ್ದಾಣದ ಕೆಲಸ ಈಗ ಯಾವ ಹಂತದಲ್ಲಿದೆ;

ಆ) ಸದರಿ ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಸಿಟಿ ಬಸ್ ನಿಲ್ದಾಣದ ನೀಲ ನಕ್ಷೆ ಸಿದ್ಧವಾಗಿದೆಯೇ;

ಇ) ಈ ಯೋಜನೆಗೆ ತಗಲುವ ಅಂದಾಜು ವೆಚ್ಚವೆಷ್ಟು;

ಈ) ಸಿಟಿ ಬಸ್ ನಿಲ್ದಾಣದ ಕೆಲಸಕ್ಕೆ ಯಾವಾಗ ಶಂಕುಸ್ಥಾಪನೆ ಮಾಡಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಇವರ ಸ್ವಾಧೀನದಲ್ಲಿರುವ 1 ಎಕರೆ 10 ಗುಂಟೆ ನಿವೇಶನಕ್ಕಾಗಿ ರೂ. 3,75,000/– ಗಳನ್ನು ಆಯುಕ್ತರು ಹುಬ್ಬಳ್ಳಿ ಧಾರವಾಡ ಮಹಾನಗರಸಭೆ ಇವರಿಗೆ ಪಾವತಿ ಮಾಡಲಾಗಿತ್ತು. ಆದರೆ, ಹುಬ್ಬಳ್ಳಿ ಧಾರವಾಡ ಮಹಾನಗರ ಸಭೆಯವರು ಇತ್ತೀಚಿನ ಮಾರುಕಟ್ಟೆ ದರದಂತೆ ರೂ. 43,58,000/–ಗಳನ್ನು ಪಾವತಿಸಬೇಕೆಂದು ತಿಳಿಸಿರುವ ಹಿನ್ನಲೆಯಲ್ಲಿ, ಮೊದಲು ಪಾವತಿಸಿದ ದರದಲ್ಲಿ ನಿವೇಶನಗಳನ್ನು ಒದಗಿಸಲು ಮತ್ತೊಮ್ಮೆ ಆಯುಕ್ತರನ್ನು ಕೋರಲಾಗುವುದು.

ಆ) ಬಸ್ ನಿಲ್ದಾಣಕ್ಕಾಗಿ ಜಮೀನನ್ನು ಸಂಸ್ಥೆಯ ವಶಕ್ಕೆ ಪಡೆದುಕೊಂಡ ನಂತರ ನೀಲಿ ನಕ್ಷೆಯನ್ನು ತಯಾರಿಸಲಾಗುವುದು.

ಇ) ಉದ್ಭವಿಸುವುದಿಲ್ಲ.

ಈ) ಸದ್ಯಕ್ಕೆ ಉದ್ಭವಿಸುವುದಿಲ್ಲ.

557(458) : ಶ್ರೀ ಹೊನ್ನಾಳಿ ಜಬ್ಬಾರ್‌ಖಾನ್ ಹಯಾತ್‌ಖಾನ್ (ಹುಬ್ಬಳ್ಳಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿದ್ಯುತ್ ಕಡಿತ ಹೋಗಲಾಡಿಸಲು ಸರ್ಕಾರ ಕೈಗೊಂಡ ಕ್ರಮವೇನು;

ಆ) ಹುಬ್ಬಳ್ಳಿ–ಧಾರವಾಡ ನಗರ ಪ್ರದೇಶಗಳಲ್ಲಿ ಯಾವ ಯಾವ ಪ್ರದೇಶಗಳಲ್ಲಿ ವಿದ್ಯುತ್ ಉಪ ಕೇಂದ್ರಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ (ವಿವರ ನೀಡುವುದು)?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿದ್ಯುತ್ ಕಡಿತ (Load Shedding)ಇರುವುದಿಲ್ಲ. ಆದರೆ ಕೆಲವೊಂದು ಈ ಕೆಳಗಿನ ಪ್ರಸಂಗಗಳಲ್ಲಿ ವಿದ್ಯುತ್ ನಿಲುಗಡೆ ಆಗುತ್ತಲಿದೆ.

1. ಲೈನ್ ದೋಷವಾದಾಗ.

2. ಲೈನ್ ನಿರ್ವಹಣೆಗೆ ಮುಂಜಾಗ್ರತೆ ಪತ್ರಿಕೆಯ ಮೂಲಕ ತಿಳಿಸಿ ನಿಲುಗಡೆ ಮಾಡಿದಾಗ.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ತ್ವರಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣಾ (ಎ.ಪಿ.ಡಿ.ಆರ್.ಪಿ.) ಕಾರ್ಯ ಯೋಜನೆಯಡಿಯಲ್ಲಿ ಸುಮಾರು 50.40 ಕೋಟಿ ರೂ.ಗಳ ಸುಧಾರಣಾ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಅವುಗಳು ಈ ಕೆಳಕಂಡಂತಿವೆ:-

ಅ. ಹಾಲಿ ಇರುವ ವಾಹಕಗಳನ್ನು ಹೆಚ್ಚಿನ ಸಾಮರ್ಥ್ಯದ ವಾಹಕಗಳಿಂದ ಪುನರ್ ವಾಹಕಗೊಳಿಸುವುದು.

ಆ. ಹೆಚ್ಚುವರಿ ವಿತರಣಾ ಪರಿವರ್ತಕಗಳನ್ನು ಅಳವಡಿಸುವುದು.

ಇ ಓವರ್ ಹೆಡ್ ವಾಹಕಗಳನ್ನು ಭೂಗತ ವಾಹಕಗಳಾಗಿ ಪರಿವರ್ತಿಸಿ ಹೊಸ ಮಾದರಿಯ ಫೀಡರ್ ಪಿಲ್ಲರ್ ಬಾಕ್ಸ್‌ಗಳನ್ನು ಅಳವಡಿಸುವುದು.

ಈ ಮೇಲಿನ ಸುಧಾರಣಾ ಕಾರ್ಯಗಳು ಜೂನ್ 2003 ರಿಂದ ಪ್ರಾರಂಭವಾಗಿದ್ದು ಡಿಸೆಂಬರ್ 2004ರಲ್ಲಿ ಮುಕ್ತಾಯಗೊಳ್ಳುವ ನಿರೀಕ್ಷೆಯಿದೆ. ಕಾರ್ಯಪ್ರಗತಿ ಸಮಯದಲ್ಲಿ ಕೆಲವೊಂದು ಪ್ರದೇಶಗಳಲ್ಲಿ ನಿಗದಿತ ವೇಳೆಯಲ್ಲಿ ವಿದ್ಯುತ್ ನಿಲುಗಡೆ ಇತ್ತೀಚಿನ ದಿನಗಳಲ್ಲಿ ಕಂಡು ಬರುತ್ತಿದೆ. ಈ ಕಾರ್ಯಗಳು ಮುಗಿಯುತ್ತಾ ಬಂದಂತೆ ವಿದ್ಯುತ್ ನಿಲುಗಡೆ ಕಡಿಮೆಯಾಗುತ್ತದೆ ಮತ್ತು ವಿದ್ಯುತ್ ಸರಬರಾಜಿನಲ್ಲಿ ಸುಧಾರಣೆ ಉಂಟಾಗುತ್ತದೆ.

ಆ) ಹುಬ್ಬಳ್ಳಿ-ಧಾರವಾಡ ನಗರ ಪರದೇಶಗಳಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ ವಿದ್ಯುತ್ ಸಬ್-ಸ್ಟೇಷನ್‌ಗಳ ಪ್ರದೇಶವಾರು ವಿವರಗಳು ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಪ್ರದೇಶ	ಉದ್ದೇಶಿತ ಸಬ್-ಸ್ಟೇಷನ್ನಿನ ಸಾಮರ್ಥ್ಯ
1.	ಮೃತ್ಯುಂಜಯ ನಗರ	110/11 ಕೆ.ವಿ. 1x10 ಎಂ.ವಿ.ಎ.
2.	ಗದಗ ರೋಡ್	110/11 ಕೆ.ವಿ. 1x10 ಎಂ.ವಿ.ಎ.
3.	ಗಬ್ಬೂರು	110/11 ಕೆ.ವಿ. 2x10 ಎಂ.ವಿ.ಎ.
4.	ಆನಂದ ನಗರ	110/33 ಕೆ.ವಿ. 2x10 ಎಂ.ವಿ.ಎ.
5.	ಪಿ.ಹೆಚ್.ಸಿ. ಕಾಂಪೌಂಡ್	110/33 ಕೆ.ವಿ. 2x10 ಎಂ.ವಿ.ಎ. ಉನ್ನತೀಕರಣ
6.	ತಡಸನ ಕೊಪ್ಪ	110/11 ಕೆ.ವಿ. 1x10 ಎಂ.ವಿ.ಎ
7.	ಅಕ್ಷಯ ಕಾಲೋನಿ	110/11 ಕೆ.ವಿ. 2x10 ಎಂ.ವಿ.ಎ
8.	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ	110/33 ಕೆ.ವಿ. 2x10 ಎಂ.ವಿ.ಎ ಉನ್ನತೀಕರಣ
9.	ಕೃಷಿ ವಿಶ್ವವಿದ್ಯಾಲಯ, ಧಾರವಾಡ	33/11 ಕೆ.ವಿ. 2x10 ಎಂ.ವಿ.ಎ
10.	ಕೆ.ಎಂ.ಸಿ. ಹುಬ್ಬಳ್ಳಿ	33/11 ಕೆ.ವಿ. 2x5 ಎಂ.ವಿ.ಎ (ಕೆಲಸ ಪ್ರಗತಿಯಲ್ಲಿದೆ)
11.	ಕುಸುಗಲ್ ರೋಡ್	33/11 ಕೆ.ವಿ. 2x5 ಎಂ.ಪಿ.ಎ (ಕೆಲಸ ಪ್ರಗತಿಯಲ್ಲಿದೆ)